# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 229

ಸದಸ್ಯರ ಹೆಸರು : ಶ್ರೀ ಹೆಚ್.ಎಸ್.ಗೋಪಿನಾಥ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 28-01-2026

| | ಪ್ರಶ್ನೆ | ಉತ್ತರ |
|---|---|---|
| ಅ. | ಹಳೆಯ ಮತ್ತು ಹೆಚ್ಚು ಮಾಲಿನ್ಯ ಉಂಟುಮಾಡುವ ವಾಹನಗಳ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು: ಎಲೆಕ್ಟ್ರಿಕ್ ವಾಹನಗಳನ್ನು ಉತ್ತೇಜಿಸಲು ರಾಜ್ಯ ಸರ್ಕಾರ ನೀಡುತ್ತಿರುವ ಪ್ರೋತ್ಸಾಹಧನ ಯಾವುವು: | ಹಳೆಯ ಮತ್ತು ಹೆಚ್ಚು ಮಾಲಿನ್ಯ ಉಂಟು ಮಾಡುವ ವಾಹನಗಳ ನಿಯಂತ್ರಣಕ್ಕೆ ಸಾರಿಗೆ ಇಲಾಖೆಯಿಂದ ನಿರಂತರವಾಗ ಪ್ರವರ್ತನ ಕಾರ್ಯ ಕೈಗೊಂಡು ವಾಯುಮಾಲಿನ್ಯವುಂಟುಮಾಡುವ ವಾಹನಗಳ ಮೇಲೆ ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ.<br>1. ಅಂತಹ ದ್ವಿಚಕ್ರ / ತ್ರಿಚಕ್ರ ವಾಹನಗಳಿಗೆ ರೂ.1,500/-ಗಳನ್ನು ಮತ್ತು ಲಘು ಮತ್ತು ಭಾರಿ ಗಾತ್ರದ ವಾಹನಗಳಿಗೆ ರೂ.3,000/-ಗಳ ದಂಡವನ್ನು ವಿಧಿಸಲಾಗುತ್ತಿದೆ. ಕಳೆದ ಮೂರು(3) ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ತೆಗೆದುಕೊಂಡ ಕ್ರಮದ ವರದಿ ಕೆಳಕಂಡಂತಿದೆ.<br><br>ವರ್ಷ / ತಪಾಸಣೆ ಮಾಡಿದ ವಾಹನಗಳ ಸಂಖ್ಯೆ / ದಾಖಲಿಸಿದ ಪ್ರಕರಣಗಳ ಸಂಖ್ಯೆ / ದಂಡ ವಸೂಲಿ (ರೂ.ಗಳಲ್ಲಿ)<br>2023-24 / 13,39,662 / 57,051 / 8,45,27,564<br>2024-25 / 13,15,244 / 67,957 / 11,35,21,803<br>2025-26 (Dec-2025 ರ ಅಂತ್ಯಕ್ಕೆ ) / 8,88,582 / 60,954 / 7,32,61,401<br><br>2. ಕರ್ನಾಟಕ ಮೋಟಾರು ವಾಹನ ನಿಯಮಾವಳಿ, 1989ರ ನಿಯಮ 231-ಬಿ ರನ್ವಯ ವಾಹನಗಳ ವಾಯುಮಾಲಿನ್ಯವನ್ನು ತಪಾಸಿಸುವ ಸಲುವಾಗಿ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳ ಸ್ಥಾಪನೆಗೆ ಅನುಮತಿ ನೀಡಲಾಗುತ್ತಿದ್ದು, ಸದರಿ ಕೇಂದ್ರಗಳಲ್ಲಿ ವಾಹನಗಳನ್ನು ಪರಿಶೀಲಿಸಿ ವಾಯುಮಾಲಿನ್ಯ ಹತೋಟಿಯಲ್ಲಿರುವ ಬಗ್ಗೆ ಪ್ರಮಾಣಪತ್ರಗಳನ್ನು ನೀಡಲಾಗುತ್ತಿದೆ.<br>3. ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ವಾಹನಗಳಿಗೆ Compressed Natural Gas ಮತ್ತು Electric Propulsion ಕಿಟ್ ಗಳನ್ನು ಅಳವಡಿಸಲು |

| | ಪ್ರಶ್ನೆ | ಉತ್ತರ |
|---|---|---|
| | | ರೆಟ್ರೋಫಿಟ್ಮೆಂಟ್ ಕೇಂದ್ರಗಳನ್ನು ಸ್ಥಾಪಿಸಲು ಅನುಮತಿ ನೀಡಲಾಗುತ್ತಿದ್ದು, ಸದರಿ ಕೇಂದ್ರಗಳಲ್ಲಿ ವಾಹನಗಳಿಗೆ ಅಳವಡಿಸುವ Compressed Natural Gas ಮತ್ತು Electric Propulsion ಕಿಟ್ ಗಳಿಂದ ವಾಯುಮಾಲಿನ್ಯವನ್ನು ನಿಯಂತ್ರಿಸ ಬಹುದಾಗಿರುತ್ತದೆ.<br>4. ಸಾರಿಗೆ ಇಲಾಖೆಯಲ್ಲಿ ಸಂಗ್ರಹಿಸುತ್ತಿರುವ ಹಸಿರು ತೆರಿಗೆ ನಿಧಿಯಿಂದ ರಾಜ್ಯದಲ್ಲಿ ವಾಯುಮಾಲಿನ್ಯ ನಿಯಂತ್ರಿಸಲು ಮತ್ತು ವಾಯು ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ, ಚಲನಚಿತ್ರ ಮಂದಿರಗಳಲ್ಲಿ, ರೆಡಿಯೋ ವಾಹಿನಿಗಳಲ್ಲಿ, LED ವಾಹನಗಳಲ್ಲಿ, DIPR ಮತ್ತು MCA ಮೂಲಕ ಹಮ್ಮಿಕೊಳ್ಳಲಾಗುತ್ತಿದ್ದು, ಇದರ ಜೊತೆಗೆ ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆಯಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯವನ್ನು ತಗ್ಗಿಸುವ ಹಿನ್ನಲೆಯಲ್ಲಿ ಪಳೆಯುಳಿಕೆ ಇಂಧನವನ್ನು ಬಳಸುವ ಸಾಂಪ್ರದಾಯಿಕ ವಿಧಾನವನ್ನು ತಡೆಗಟ್ಟಿ, Bureau of Energy Efficiency (BEE) ಭಾರತ ಸರ್ಕಾರದ ಮಾರ್ಗದರ್ಶನದನುಸಾರ Solar Panel ಗಳ ಮೂಲಕ ಸೂರ್ಯನ ಬೆಳಕನ್ನು ವಿದ್ಯುತ್ ಆಗಿ ಪರಿವರ್ತಿಸಿ ಸ್ವಂತ ಕಟ್ಟಡ ಹೊಂದಿರುವ RTO ಕಛೇರಿಗಳಿಗೆ ಅಗತ್ಯವಿರುವ ವಿದ್ಯುತ್ ಅನ್ನು ಉತ್ಪಾದಿಸುವ ಸಂಬಂಧ Solar Panel ಗಳನ್ನು ಅಳವಡಿಸಲಾಗುತ್ತಿದೆ.<br><br>ಇನ್ನು, ಎಲೆಕ್ಟ್ರಿಕ್ ವಾಹನಗಳನ್ನು ಉತ್ತೇಜಿಸುವ ಸಲುವಾಗಿ ಸಾರಿಗೆ ಇಲಾಖೆಯು ಪರಿಸರಸ್ನೇಹಿ ವಿದ್ಯುತ್ ಚಾಲಿತ ವಾಹನಗಳಿಗೆ ನೋಂದಣಿ ಶುಲ್ಕ ವಿನಾಯಿತಿ, ಶುಲ್ಕರಹಿತ ರಹದಾರಿ ನೀಡುವಿಕೆ ಮತ್ತು 25 ಲಕ್ಷದೊಳಗಿನ ವೆಚ್ಚದ ವಾಹನಗಳಿಗೆ ಜೀವಾವಧಿ ತೆರಿಗೆಯಿಂದ ವಿನಾಯಿತಿ ನೀಡಲಾಗುತ್ತಿದೆ.<br><br>ಮುಂದುವರೆದು, ಸಾರಿಗೆ ನಿಗಮಗಳಲ್ಲಿ ಹೆಚ್ಚು ಮಾಲಿನ್ಯ ಉಂಟು ಮಾಡುವ ವಾಹನಗಳ ನಿಯಂತ್ರಣ ಮತ್ತು ಎಲೆಕ್ಟ್ರಿಕ್‌ವಾಹನಗಳ ಉತ್ತೇಜನಕ್ಕೆ ಕೈಗೊಂಡ ಕ್ರಮದ ವಿವರ ಈ ಕೆಳಕಂಡಂತಿದೆ.<br>• ನಿಗಮದಲ್ಲಿ ಕಾರ್ಯಾಚರಣೆಯಲ್ಲಿರುವ ಹಳೆಯ ಮತ್ತು ಹೆಚ್ಚು ಮಾಲಿನ್ಯ ಉಂಟುಮಾಡುವ ವಾಹನಗಳ ನಿಯಂತ್ರಣಕ್ಕೆ ಈಗಾಗಲೇ ಕರ್ನಾಟಕ ರಾಜ್ಯ ಸರ್ಕಾರದ ಸುತ್ತೋಲೆಗಳನ್ವಯ ನಿಗಮದಲ್ಲಿ ಕಾರ್ಯಾಚರಣೆಯಲ್ಲಿರುವ ಬಿಎಸ್-1, ಬಿಎಸ್ 2 ಹಾಗೂ ಬಿಎಸ್ 3 ಬಸ್‌ಗಳು 65 ಹೆಚ್‌ಎಸ್‌ಯು ಮತ್ತು ಎಲ್ಲಾ ಮಾದರಿಯ ಬಿಎಸ್-4 ಬಸ್‌ಗಳು 50 ಹೆಚ್.ಎಸ್.ಯು ಹಾಗೂ ಬಿಎಸ್-6 ಬಸ್‌ಗಳಿಗೆ 25 ಹೆಚ್.ಎಸ್.ಯು ಮಿತಿಯ ಒಳಗಿರುವಂತೆ ಆದೇಶಿಸಲಾಗಿರುತ್ತದೆ. ಅದರಂತೆ, ಮಿತಿಗಿಂತ ಹೆಚ್ಚು ಹೊಗೆ ಸೂಸುವ ವಾಹನಗಳನ್ನು ಗುರ್ತಿಸಿ ಅವುಗಳ ದುರಸ್ತಿ ಕಾರ್ಯಗಳನ್ನು ನಿರ್ವಹಣೆ ಮಾಡಿದ ನಂತರವೇ ಕಾರ್ಯಾಚರಣೆ ಮೇಲೆ ನಿಯೋಜಿಸಲಾಗುತ್ತಿದೆ. |

| | ಪ್ರಶ್ನೆ | ಉತ್ತರ |
|---|---|---|
| | | • ಕ.ರಾ.ರ.ಸಾ. ನಿಗಮದ ಯಾಂತ್ರಿಕ ಇಲಾಖೆಯ ಸುತ್ತೋಲೆ ಸಂಖ್ಯೆ: 810, ದಿನಾಂಕ:23.09.2023 ರನ್ವಯ ನಿಗಮದಲ್ಲಿ ಕಾರ್ಯಾಚರಿಸಲಾಗುವ ವಾಹನಗಳನ್ನು ನಿಗಧಿತ ಕಿ.ಮೀ ಹಾಗೂ ಕೇಂದ್ರ ಸರ್ಕಾರದ ಅಧಿಸೂಚನೆಯಂತೆ 15 ವರ್ಷ ಪೂರ್ಣಗೊಂಡಿರುವ ವಾಹನಗಳನ್ನು ಕಡ್ಡಾಯವಾಗಿ ನಿರುಪಯುಕ್ತಗೊಳಿಸಲಾಗುತ್ತಿದೆ ಹಾಗೂ ಪ್ರತಿ ವರ್ಷ ನಿಗಮದ ವಾಹನಗಳನ್ನು ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಅರ್ಹತಾ ಪತ್ರ ನವೀಕರಣಕ್ಕೆ ಒಳಪಡಿಸಿ ಸುಸ್ಥಿತಿಯಲ್ಲಿರುವ ಕುರಿತು ಖಾತ್ರಿಪಡಿಸಿಕೊಂಡು ಕಾರ್ಯಾಚರಣೆಗೊಳಿಸಲಾಗುತ್ತಿರುತ್ತದೆ.<br>• ನಿಗಮದಲ್ಲಿ ಹಳೆಯ ಮತ್ತು ಹೆಚ್ಚು ಮಾಲಿನ್ಯ ಉಂಟುಮಾಡುವ ವಾಹನಗಳ ನಿಯಂತ್ರಣಕ್ಕಾಗಿ ಕಡಿಮೆ ಹೊಗೆ ಸೂಸುವ ಬಿಎಸ್-6 ಮಾದರಿಯ ಹೊಸ ಬಸ್ಸುಗಳನ್ನು ಖರೀದಿಸಲಾಗುತ್ತಿದೆ ಹಾಗೂ ಎಲೆಕ್ಟ್ರಿಕ್ ಬಸ್ಸುಗಳನ್ನು ಸೇರ್ಪಡೆಗೊಳಿಸುತ್ತಿದೆ.<br>• ನಿಗಮದ ವಾಹನಗಳ ವಾಯು ಮಾಲಿನ್ಯ ನಿಯಂತ್ರದಲ್ಲಿಡಲು ಪ್ರತಿ ತಿಂಗಳು ಎಲ್ಲಾ ವಾಹನಗಳ ಹೊಗೆ ತಪಾಸಣೆ ಮಾಡಲಾಗುತ್ತದೆ ಹಾಗೂ ಹೆಚ್ಚಿನ ಹೊಗೆ ಕಂಡು ಬಂದಲ್ಲಿ ಅವಶ್ಯ ದುರಸ್ತಿ ಕೈಗೊಂಡು ನಿಯಂತ್ರಣಕ್ಕೆ ತರಲಾಗುತ್ತದೆ. ಅಲ್ಲದೆ, ಸರ್ಕಾರದಿಂದ ಕಾಲಕಾಲಕ್ಕೆ ನಿರ್ದಿಷ್ಟಪಡಿಸಿರುವ Bharat Stage Norm ಗೆ ಹೊಂದುವಂತಹ ವಾಹನಗಳನ್ನು ಮಾತ್ರ ಖರೀದಿಸಲಾಗುತ್ತದೆ.<br>• ಎಲೆಕ್ಟ್ರಿಕ್ ವಾಹನಗಳನ್ನು ಉತ್ತೇಜಿಸಲು ಕೇಂದ್ರ ಸರ್ಕಾರದ P.M e-BUS Seva ಯೋಜನೆಯಡಿಯಲ್ಲಿ ಒಟ್ಟು 750 ವಿದ್ಯುತ್ ಚಾಲಿತ ಬಸ್ಸುಗಳು ಮಂಜೂರಾಗಿದ್ದು, Convergence Energy Service Limited (CESL) ರವರಿಂದ ಕ್ರೋಡಿಕೃತ ಪ್ರಮಾಣಕ್ಕೆ ಟೆಂಡರ್ ಕರೆಯುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>• ಎಲೆಕ್ಟ್ರಿಕ್ ವಾಹನಗಳನ್ನು ಉತ್ತೇಜಿಸಲು ಕೇಂದ್ರ ಸರ್ಕಾರದ P.M e-Drive ಯೋಜನೆಯಡಿಯಲ್ಲಿ ಬೆಂ.ಮ.ಸಾ.ಸಂಸ್ಥೆಗೆ ಒಟ್ಟು 4500 ವಿದ್ಯುತ್ ಚಾಲಿತ ಬಸ್ಸುಗಳು ಮಂಜೂರಾಗಿದ್ದು, Convergence Energy Service Limited (CESL) ರವರಿಂದ ಕ್ರೋಡಿಕೃತ ಪ್ರಮಾಣಕ್ಕೆ ಟೆಂಡರ್ ಕರೆಯುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>• Karnataka Electric Bus Program (KEBP) ಯೋಜನೆಯಡಿ ನಿಗಮದಲ್ಲಿ ವಿದ್ಯುತ್ ಚಾಲಿತ ಬಸ್ಸುಗಳನ್ನು ಹಂತ-ಹಂತವಾಗಿ ಸೇರ್ಪಡೆ ಮಾಡುವ ಬಗ್ಗೆ ಯೋಜನೆ ರೂಪಿಸಲಾಗುತ್ತಿದೆ. |
| ಆ. | ಅಪಘಾತ ಸಂಭವಿಸುವ (Black spots) ಗುರುತಿಸಿ ಯಾವ ಕ್ರಮ ಕೈಗೊಳ್ಳಲಾಗಿದೆ: ಶಾಲಾ ವಾಹನಗಳ ಸುರಕ್ಷತೆ ಪರಿಶೀಲನೆ ಎಷ್ಟು ಬಾರಿ ನಡೆಯುತ್ತಿವೆ: | ರಾಜ್ಯ ಹೆದ್ದಾರಿಗಳು, ಮುಖ್ಯ ಜಿಲ್ಲಾ ರಸ್ತೆಗಳು ಹಾಗೂ ಇತರೆ ರಸ್ತೆಗಳಲ್ಲಿನ ಬ್ಲಾಕ್ ಸ್ಪಾಟ್ ಗುರುತಿಸುವುದು ಮತ್ತು ಅವುಗಳನ್ನು ಸರಿಪಡಿಸಲು ಸರ್ಕಾರದ ಆದೇಶ ಸಂಖ್ಯೆ: PWD 42 EAP 2017, ದಿನಾಂಕ: 04-04-2017 ರಲ್ಲಿ ಮಾರ್ಗಸೂಚಿಗಳನ್ನು ನಿಗಧಿಪಡಿಸಲಾಗಿದೆ. ಸದರಿ ಮಾರ್ಗಸೂಚಿಗಳನ್ವಯ, ಪೊಲೀಸ್ ಇಲಾಖೆಯಿಂದ ಸ್ವೀಕೃತವಾಗುವ ಬ್ಲಾಕ್‌ಸ್ಪಾಟ್‌ಗಳ ವರದಿಯನ್ನು ಪಾಲುದಾರಿಕಾ ಇಲಾಖೆಗಳಾದ ಲೋಕೋಪಯೋಗಿ ಇಲಾಖೆ, ಬಿ.ಬಿ.ಎಂ.ಪಿ, |

| | ಪ್ರಶ್ನೆ | ಉತ್ತರ |
|---|---|---|
| | | ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಗಳ ಸಂಬಂಧಪಟ್ಟ ಮುಖ್ಯ ಕಾಮಗಾರಿ ಅಭಿಯಂತರರುಗಳಿಗೆ ತಕ್ಷಣ ಜಾರಿಗೆ ತರಬಹುದಾದ ಅಲ್ಪಾವಧಿ ಸುರಕ್ಷತಾ ಕ್ರಮಗಳಾಗಿ ಎಚ್ಚರಿಕಾ ಸೂಚನಾಫಲಕಗಳ ಅಳವಡಿಕೆ, ರಸ್ತೆ ಮಾರ್ಕಿಂಗ್‌ಗಳು, ವೇಗ ನಿಯಂತ್ರಣ ಕ್ರಮಗಳು, ವೈಜ್ಞಾನಿಕ ಸ್ಪೀಡ್ ಡಿಟೆಕ್ಟರ್‌ಗಳ ನಿರ್ಮಾಣ ಹಾಗೂ ರಸ್ತೆ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲು ಮತ್ತು ದೀರ್ಘಾವಧಿ ಶಾಶ್ವತ ಪರಿಹಾರ ಕ್ರಮಗಳಾಗಿ ರಸ್ತೆ ಸುಧಾರಣೆ, ಜಂಕ್ಷನ್ ಅಭಿವೃದ್ಧಿ ಹಾಗೂ ಇತರೆ ಇಂಜಿನಿಯರಿಂಗ್ ಇತ್ಯಾದಿ ಕ್ರಮಗಳನ್ನು ಅನುಷ್ಠಾನಗೊಳಿಸಲು ಕಳುಹಿಸಿಕೊಡಲಾಗುತ್ತದೆ.<br><br>ಅದರಂತೆ, ರಾಜ್ಯದಲ್ಲಿ ಗುರುತಿಸಲಾಗಿರುವ ಬ್ಲ್ಯಾಕ್‌ಸ್ಪಾಟ್‌ಗಳ ಮತ್ತು ಸರಿಪಡಿಸಲಾಗಿರುವ ಅಂಕಿ-ಅಂಶಗಳ ವಿವರಗಳನ್ನು **ಅನುಬಂಧ-1 ರಲ್ಲಿ** ಒದಗಿಸಲಾಗಿದೆ.<br><br>ಶಾಲಾ ವಾಹನಗಳ ಸುರಕ್ಷತೆ ಕುರಿತು ಕೇಂದ್ರ ಮೋಟಾರು ವಾಹನಗಳ ನಿಯಮಾವಳಿ 1989ರ ನಿಯಮ 62ರಂತೆ ಹೊಸ ವಾಹನ ನೋಂದಣಿಯಾದ ನಂತರ ಎಂಟು ವರ್ಷಗಳವರೆಗೆ ಪ್ರತಿ ಎರಡು ವರ್ಷಕ್ಕೊಮ್ಮೆ, ಆನಂತರ ನೋಂದಣಿ ದಿನಾಂಕದಿಂದ 15 ವರ್ಷಗಳವರೆಗೆ ಪ್ರತಿ ವರ್ಷ ವಾಹನಗಳ ಅರ್ಹತಾ ಪತ್ರ ನವೀಕರಣ ಸಮಯದಲ್ಲಿ ವಾಹನಗಳನ್ನು ಪರಿಶೀಲಿಸಿ ವಾಹನಗಳ ಅರ್ಹತಾ ಪತ್ರಗಳನ್ನು ನವೀಕರಿಸಲಾಗುತ್ತಿದ.<br><br>ಇದಲ್ಲದೆ ನಿರಂತರವಾಗಿ ಪ್ರವರ್ತನ ಸಮಯದಲ್ಲಿ ಶಾಲಾ ವಾಹನಗಳನ್ನು ತಪಾಸಣೆಗೊಳಪಡಿಸಿ ಶಾಲಾ ವಾಹನಗಳಲ್ಲಿ ಸುರಕ್ಷತೆ ಕ್ರಮಗಳನ್ನು ಅಳವಡಿಸಿರುವ ಕುರಿತು ಪರಿಶೀಲಿಸಿ ಕ್ರಮವಹಿಸಲಾಗುತ್ತಿದೆ.<br><br>ಮುಂದುವರೆದು, ಸಾರಿಗೆ ನಿಗಮಗಳಲ್ಲಿ ಅಪಘಾತ ಸಂಭವಿಸುವ (Black Spot)ಗಳನ್ನು ಗುರುತಿಸಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ನಿಗಮದ ವಿಭಾಗಗಳ ವ್ಯಾಪ್ತಿಗೆ ಬರುವ ಹೆಚ್ಚಿನ ಅಪಘಾತಗಳು ಘಟಿಸುವ ವಲಯಗಳನ್ನು ಗುರುತಿಸಿ, ಆ ಸ್ಥಳಗಳಲ್ಲಿ ಸೂಚನಾ ಫಲಕಗಳನ್ನು ಹಾಕಿಸುವುದಲ್ಲದೆ, ಘಟಕಗಳಲ್ಲೂ ಸಹ ಪ್ರದರ್ಶಿಸಿ ಎಲ್ಲಾ ಚಾಲಕರ ಗಮನಕ್ಕೆ ತಂದು ತಿಳುವಳಿಕೆ ನೀಡಲಾಗುತ್ತಿದೆ.<br>• ಅಪಘಾತ ಪ್ರೇರಿತ ಸ್ಥಳಗಳಲ್ಲಿ (Black Spot) ರಸ್ತೆ ತಿರುವಿನಲ್ಲಿ ಮತ್ತು ಏರು ರಸ್ತೆಯಲ್ಲಿ ಓವರ್‌ಟೇಕ್ ಮಾಡದಂತೆ ಮತ್ತು ಎಚ್ಚರಿಕೆಯಿಂದ ಚಾಲನೆ ಮಾಡುವಂತೆ ಸೂಚಿಸಲಾಗಿದೆ.<br>• ವಿಭಾಗಗಳ ವ್ಯಾಪ್ತಿಯಲ್ಲಿ ಅಪಘಾತ ಹೆಚ್ಚಾಗುವ ಸ್ಥಳಗಳಲ್ಲಿ (Black Spots) ಪ್ರತಿನಿತ್ಯವೂ ಮಾರ್ಗ ತನಿಖಾ ಕಾರ್ಯದ ಜೊತೆಗೆ ಮಾರ್ಗ ತನಿಖಾ ವಾಹನಗಳನ್ನು ನಿಲ್ಲಿಸಿ ಮಾರ್ಗ ತನಿಖಾ ಸಿಬ್ಬಂದಿಗಳು ಚಾಲನಾ ಸಿಬ್ಬಂದಿಗಳಿಗೆ ಜಾಗ್ರತೆಯಾಗಿ ವಾಹನ ಚಲಾಯಿಸುವಂತೆ ಸೂಕ್ತ ತಿಳುವಳಿಕೆ ನೀಡಲಾಗುತ್ತಿದೆ. |

| | ಪ್ರಶ್ನೆ | ಉತ್ತರ |
|---|---|---|
| ಇ. | RTO ಕಛೇರಿಗಳಲ್ಲಿ ಆಗುತ್ತಿರುವ ವಿಳಂಬ ಮತ್ತು ಮಧ್ಯವರ್ತಿಗಳ ಸಮಸ್ಯೆ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು; ಹಾಗೂ ಆನ್‌ಲೈನ್ ಸೇವೆಗಳಿದ್ದರೂ ಜನರು ಕಛೇರಿಗೆ ಬರುವ ಪರಿಸ್ಥಿತಿ ಉದ್ಭವಿಸಿರುವುದಕ್ಕೆ ಕಾರಣಗಳೇನು? (ವಿವರ ನೀಡುವುದು) | ದಿನಾಂಕ:01.11.2021 ರಿಂದ ಸಾರಿಗೆ ಇಲಾಖೆಯಲ್ಲಿ ಸಾರಥಿ ತಂತ್ರಾಂಶಕ್ಕೆ (ಒಟ್ಟು 31 ಸೇವೆಗಳು) ಸಂಬಂಧಿಸಿದ ಈ ಕೆಳಕಂಡ 15 ಸೇವೆಗಳನ್ನು ಕಾಂಟ್ಯಾಕ್ಟ್‌ಲೆಸ್ ಸೇವೆಗಳಾಗಿ ಮತ್ತು 16 ಸೇವೆಗಳನ್ನು ನಾನ್ ಕಾಂಟ್ಯಾಕ್ಟ್‌ಲೆಸ್ ಸೇವೆಗಳಾಗಿ ಸಾರ್ವಜನಿಕರಿಗೆ ಒದಗಿಸಲಾಗುತ್ತಿದೆ. |

| ಕ್ರ. ಸಂ. | ಕಾಂಟಾಕ್ಟ್ ಲೆಸ್ ಸೇವೆಗಳು |
|---|---|
| 1 | ಕಲಿಕಾ ಚಾಲನಾ ಅನುಜ್ಞಾ ಪತ್ರ |
| 2 | ಕಲಿಕಾ ಚಾಲನಾ ಅನುಜ್ಞಾ ಪತ್ರದಲ್ಲಿ ಹೆಸರು ಬದಲಾವಣೆ |
| 3 | ಕಲಿಕಾ ಚಾಲನಾ ಅನುಜ್ಞಾ ಪತ್ರದಲ್ಲಿ ವಿಳಾಸ ಬದಲಾವಣೆ |
| 4 | ನಕಲು ಕಲಿಕಾ ಚಾಲನಾ ಅನುಜ್ಞಾ ಪತ್ರ |
| 5 | ಚಾಲನಾ ಅನುಜ್ಞಾ ಪತ್ರದಲ್ಲಿ ವಿಳಾಸ ಬದಲಾವಣೆ |
| 6 | ಚಾಲನಾ ಅನುಜ್ಞಾ ಪತ್ರದಲ್ಲಿ ಹೆಸರು ಬದಲಾವಣೆ |
| 7 | ನಕಲು ಚಾಲನಾ ಅನುಜ್ಞಾ ಪತ್ರ |
| 8 | ಚಾಲನಾ ಅನುಜ್ಞಾ ಪತ್ರ ನವೀಕರಣ |
| 9 | ಅಂತರರಾಷ್ಟ್ರೀಯ ಚಾಲನಾ ಪರವಾನಗಿ ನೀಡುವಿಕೆ |
| 10 | ಚಾಲನಾ ಅನುಜ್ಞಾ ಪತ್ರ ವಹಿ |
| 11 | ಬ್ಯಾಡ್ಜ್ ನೊಂದಿಗೆ ನಿರ್ವಾಹಕ ಚಾಲನಾ ಅನುಜ್ಞಾ ಪತ್ರ ನೀಡಿಕೆ |
| 12 | ನಿರ್ವಾಹಕ ಚಾಲನಾ ಅನುಜ್ಞಾ ಪತ್ರ ನವೀಕರಣ |
| 13 | ನಕಲು ನಿರ್ವಾಹಕ ಚಾಲನಾ ಅನುಜ್ಞಾ ಪತ್ರ |
| 14 | ನಿರ್ವಾಹಕ ಚಾಲನಾ ಅನುಜ್ಞಾ ಪತ್ರದಲ್ಲಿ ವಿಳಾಸ ಬದಲಾವಣೆ |
| 15 | ನಿರ್ವಾಹಕ ಚಾಲನಾ ಅನುಜ್ಞಾ ಪತ್ರದಲ್ಲಿ ಹೆಸರು ಬದಲಾವಣೆ |

| ಕ್ರ. ಸಂ. | ನಾನ್‌ಕಾಂಟಕ್ಟ್‌ಲೆಸ್‌ಸೇವೆಗಳು |
|---|---|
| 1 | ಹೊಸ ಚಾಲನಾ ಅನುಜ್ಞಾ ಪತ್ರ |
| 2 | ಹೊರದೇಶದವರಿಗೆ / ರಕ್ಷಣಾ ಇಲಾಖೆಯವರಿಗೆ ಹೊಸ ಚಾಲನಾ ಅನುಜ್ಞಾ ಪತ್ರ |
| 3 | ಚಾಲನಾ ಅನುಜ್ಞಾ ಪತ್ರದಲ್ಲಿ ಹೊಸ ವಾಹನ ವರ್ಗ ಸೇರ್ಪಡೆ |
| 4 | ರಕ್ಷಣಾ ಇಲಾಖೆಯವರು ಹೊಂದಿರುವ ಚಾಲನಾ ಅನುಜ್ಞಾ ಪತ್ರದಲ್ಲಿ ಹೊಸ ವಾಹನ ವರ್ಗ ಸೇರ್ಪಡೆ |
| 5 | ಅವಧಿ ಮೀರಿದ ಚಾಲನಾ ಅನುಜ್ಞಾ ಪತ್ರದ ನವೀಕರಣ |
| 6 | ಬದಲಿ ಚಾಲನಾ ಅನುಜ್ಞಾ ಪತ್ರ |

| | ಪ್ರಶ್ನೆ | ಉತ್ತರ |
|---|---|---|

| | |
|---|---|
| 7 | ಚಾಲಕರಿಗೆ ಸಾರ್ವಜನಿಕ ಸೇವಾ ವಾಹನ ಬ್ಯಾಡ್ಜ್ ವಿತರಣೆ |
| 8 | ಚಾಲನಾ ಅನುಜ್ಞಾ ಪತ್ರದಲ್ಲಿನ ಛಾಯಾಚಿತ್ರ ಮತ್ತು ಸಹಿಗಳ ಬದಲಾವಣೆ |
| 9 | ಚಾಲನಾ ಅನುಜ್ಞಾ ಪತ್ರಗಳನ್ನು ಒಂದುಗೂಡಿಸುವುದು |
| 10 | ಅಪಾಯಕಾರಿ ವಸ್ತುಗಳನ್ನು ಸಾಗಿಸುವ ವಾಹನಗಳನ್ನು ಓಡಿಸಲು ಚಾಲನಾ ಅನುಜ್ಞಾ ಪತ್ರದಲ್ಲಿ ಹಿಂಬರಹ ನೀಡುವಿಕೆ |
| 11 | ಗುಡ್ಡಗಾಡು / ಬೆಟ್ಟದ ಪ್ರದೇಶದಲ್ಲಿ ವಾಹನಗಳನ್ನು ಓಡಿಸಲು ಚಾಲನಾ ಅನುಜ್ಞಾ ಪತ್ರದಲ್ಲಿ ಹಿಂಬರಹ ನೀಡುವಿಕೆ |
| 12 | ಚಾಲನಾ ಅನುಜ್ಞಾ ಪತ್ರದಲ್ಲಿನ ವಾಹನ ವರ್ಗವನ್ನು ಸರೆಂಡರ್ ಮಾಡುವುದು |
| 13 | ಹೊಸ ವಾಹನ ಚಾಲನಾ ತರಬೇತಿ ಶಾಲೆ ತೆರೆಯಲು ಅನುಜ್ಞಾ ಪತ್ರ |
| 14 | ನಕಲು ವಾಹನ ಚಾಲನಾ ತರಬೇತಿ ಶಾಲೆ ಅನುಜ್ಞಾ ಪತ್ರ |
| 15 | ವಾಹನ ಚಾಲನಾ ತರಬೇತಿ ಶಾಲೆಯ ಅನುಜ್ಞಾ ಪತ್ರ ನವೀಕರಣ |
| 16 | ನಿರ್ವಾಹಕ ಚಾಲನಾ ಅನುಜ್ಞಾ ಪತ್ರದಲ್ಲಿ ಬಯೋಮೆಟ್ರಿಕ್ ಬದಲಾವಣೆ |

ಹಾಗೂ ವಾಹನ್ ತಂತ್ರಾಂಶಕ್ಕೆ (ಒಟ್ಟು 21 ಸೇವೆಗಳು) ಸಂಬಂಧಿಸಿದಂತೆ ಈ ಕೆಳಕಂಡ 09 ಸೇವೆಗಳನ್ನು ಕಾಂಟ್ಯಾಕ್ಟ್‌ಲೆಸ್ ಸೇವೆಗಳಾಗಿ ಮತ್ತು 12 ಸೇವೆಗಳನ್ನು ನಾನ್‌ಕಾಂಟ್ಯಾಕ್ಟ್‌ಲೆಸ್ ಸೇವೆಗಳಾಗಿ ಸಾರ್ವಜನಿಕರಿಗೆ ಒದಗಿಸಲಾಗುತ್ತಿದೆ

| ಕ್ರ. ಸಂ. | **ಕಾಂಟಾಕ್ಟ್ ಲೆಸ್ ಸೇವೆಗಳು** |
|---|---|
| 1 | ವಾಹನದ (ಫುಲ್ಲಿ ಬಿಲ್ಟ್) ಹೊಸ ನೋಂದಣಿಗೆ ಅರ್ಜಿ |
| 2 | ಮೋಟಾರು ವಾಹನ ತೆರಿಗೆ |
| 3 | ವಾಹನದ 'ಬಿ' ವಹಿ |
| 4 | ಸರಕು ಸಾಗಣೆ ಮತ್ತು ಪ್ರಯಾಣಿಕರ ವಾಹನಗಳಿಗೆ ಹೊಸ ರಹದಾರಿ ನೀಡಿಕೆ |
| 5 | ಸರಕು ಸಾಗಣೆ ಮತ್ತು ಪ್ರಯಾಣಿಕರ ವಾಹನಗಳ ರಹದಾರಿ ನವೀಕರಣ |
| 6 | ಸರಕು ಸಾಗಣೆ ಮತ್ತು ಪ್ರಯಾಣಿಕರ ವಾಹನಗಳ ನಕಲು ರಹದಾರಿ |
| 7 | ಪ್ರಯಾಣಿಕರ ವಾಹನಗಳಿಗೆ ವಿಶೇಷ ರಹದಾರಿ ನೀಡಿಕ |

| ಪ್ರಶ್ನೆ | ಉತ್ತರ |
|---|---|

| | |
|---|---|
| 8 | ಸರಕು ಸಾಗಣೆ ವಾಹನಗಳಿಗೆ ತಾತ್ಕಾಲಿಕ ರಹದಾರಿ ನೀಡಿಕೆ |
| 9 | ರಹದಾರಿ ಅಧ್ಯರ್ಪಣೆ / ರದ್ದತಿ |

| ಕ್ರ. ಸಂ. | ನಾನ್-ಕಾಂಟಾಕ್ಟ್ ಲೆಸ್ ಸೇವೆಗಳು |
|---|---|
| 1 | ಟ್ರೇಡ್ ಸರ್ಟಿಫಿಕೇಟ್ ನೀಡಿಕೆ |
| 2 | ಟ್ರೇಡ್ ಸರ್ಟಿಫಿಕೇಟ್ ನವೀಕರಣ |
| 3 | ಟ್ರೇಡ್ ಸರ್ಟಿಫಿಕೇಟ್ ನಲ್ಲಿ ಹೆಚ್ಚುವರಿ ಟ್ರೇಡ ಸರ್ಟಿಫಿಕೇಟ್ ಸೇರ್ಪಡೆಗೆ ಹಿಂಬರಹ |
| 4 | ಟ್ರೇಡ್ ಸರ್ಟಿಫಿಕೇಟ್ ನಲ್ಲಿ ಹೆಚ್ಚುವರಿ ವಾಹನ ವರ್ಗ ಸೇರ್ಪಡೆ |
| 5 | ಅರ್ಹತಾ ಪ್ರಮಾಣಪತ್ರ ನೀಡಿಕೆ |
| 6 | ನಕಲು ಅರ್ಹತಾ ಪ್ರಮಾಣಪತ್ರ ನೀಡಿಕೆ |
| 7 | ನೋಂದಣಿ ಪ್ರಮಾಣಪತ್ರ ನವೀಕರಣ |
| 8 | ಹೊರರಾಜ್ಯದ ವಾಹನಗಳಿಗೆ ಕರ್ನಾಟಕ ರಾಜ್ಯದ ನೋಂದಣಿ ಸಂಖ್ಯೆ ನೀಡಿಕೆ |
| 9 | ಮೋಟಾರು ವಾಹನದಲ್ಲಿ ಬದಲಾವಣೆ |
| 10 | ವಾಹನ ನೋಂದಣಿ ಪ್ರಮಾಣಪತ್ರ ಅಧ್ಯರ್ಪಣೆ |
| 11 | ಕಂತು-ಕರಾರು ರದ್ದತಿ |
| 12 | ಮ್ಯಾಕ್ಸಿಕ್ಯಾಬ್ ವಾಹನಗಳಿಗೆ ಕಾಂಟ್ರಾಕ್ಟ್ ಕ್ಯಾರೇಜ್ ರಹದಾರಿ ನೀಡಿಕೆ |

ಅಲ್ಲದೆ, ಸಾರ್ವಜನಿಕರಿಗೆ ಅವರುಗಳ ವಾಹನ ಅನುಜ್ಞಾ ಪತ್ರ ಮತ್ತು ವಾಹನ ನೋಂದಣಿಯ ಸ್ಮಾರ್ಟ್ ಕಾರ್ಡ್‌ಗಳನ್ನು ಅವರ ಮನೆಯ ವಿಳಾಸಗಳಿಗೆ ಅಂಚೆ ಸೇವೆಯ ಮೂಲಕ ತಲುಪಿಸಲಾಗುತ್ತಿದೆ. ಇಲಾಖೆಯಲ್ಲಿ ವಾಹನ್-4, ಸಾರಥಿ-4 ಮತ್ತು ಇ-ಪೇಮೆಂಟ್ ಆಫ್ ಟ್ಯಾಕ್ಸ್ ನಂತಹ ಆನ್‌ಲೈನ್ ಸೇವೆಗಳನ್ನು ರಾಜ್ಯದ ಎಲ್ಲಾ ಕಛೇರಿಗಳಲ್ಲಿ ಜಾರಿಗೆ ತರಲಾಗಿದೆ ಹಾಗೂ ಸಾರ್ವಜನಿಕರು ಕರ್ನಾಟಕ-1, ಬೆಂಗಳೂರು-1 ಮತ್ತು ಮೊಬೈಲ್-1ಎಂಬ ಆ್ಯಪ್‌ಗಳಲ್ಲಿ ವಾಹನ ವಿವರ/ಮಾಹಿತಿಗಳನ್ನು ಪಡೆಯಬಹುದಾಗಿರುತ್ತದೆ.

ಮೇಲ್ಕಂಡ ಉಪಕ್ರಮಗಳಿಂದ ಬಹುತೇಕ ಸೇವೆಗಳಿಗಾಗಿ ಸಾರ್ವಜನಿಕರು ಕಛೇರಿಗೆ ಆಗಮಿಸುವ ಅವಶ್ಯಕತೆ ಇರುವುದಿಲ್ಲ.

**ಟಿಡಿ 6 ಟಿಡಿಕೂ, 2026**

**(ರಾಮಲಿಂಗಾರೆಡ್ಡಿ)**

ಸಾರಿಗೆ ಮತ್ತು ಮುಜರಾಯಿ ಸಚಿವರು.